**<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 3520/2021**

| | | | |
|---|---|---|---|
| **ಹೆಸರು** | **:** | **ಮಹೇಶ** | **ಚಾ.ಸಾ.2** |
| **ತಂದೆಯ ಹೆಸರು** | **:** | **ಚಂದ್ರಶೇಖರ** | **ಪ್ರಾ.ಸಾ.1** |
| **ವಯಸ್ಸು** | **:** | **57 ವರ್ಷ** | **ದಿನಾಂಕಃ 05-07-2024** |
| **ಉದ್ಯೋಗ** | **:** | **ವ್ಯಾಪಾರ** | |
| **ವಾಸಸ್ಥಳ** | **:** | **ಚಂದಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-1 ಮತ್ತು 2 ರವರು ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು.

ಈಗ 1-2 ವರ್ಷಗಳ ಹಿಂದೆ ಮಧ್ಯಾಹ್ನ 10 ರಿಂದ 12 ಗಂಟೆ ಸುಮಾರಿಗೆ ಮುನ್ನಾ ಹೋಟೆಲ ಹತ್ತಿರ ಹೋಟೆಲ ಬಂದ್ ಇದ್ದ ಕಾರಣ ಸಾಕ್ಷಿಗಾಗಿ ಭಾವಚಿತ್ರ ಪಡೆದು ನನ್ನ ಸಹಿಯನ್ನು ಪಡೆದಿದ್ದಾರೆ. ಆಗ ನನ್ನ ಜೊತೆ ಪೋಲಿಸರು ಇದ್ದರು. ಪೋಲಿಸರು ಯಾವ ಕಾರಣಕ್ಕಾಗಿ ಬಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗಾಗಿ ನನ್ನ ಸಹಿ ಪಡೆದು ಭಾವಚಿತ್ರ ಪಡೆದಿದ್ದಾರೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಪಂಚನಾಮೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-</u>**

ಆರೋಪಿ ಮುನ್ನಾ ಹೊಟೆಲನ್ನು ಕೋವಿಡ್ ನಿಯಮಗಳನ್ನು ಉಲ್ಲಂಘಿಸಿ ತನ್ನ ಹೊಟೆಲನ್ನು ತೆಗೆದ ಕಾರಣ ಪೋಲಿಸರು ಪಂಚನಾಮೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆ ಸಂಗತಿಗಳನ್ನು ಪೊಲೀಸರು ಓದಿ ಹೇಳಿದ್ದಾರೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರು ಆರೋಪಿ ನಮ್ಮ ಊರಿನವನಾದ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಮ್.ಎಸ್.ಎಸ್. ವಕೀಲರಿಂದಃ-**</u> ಇಲ್ಲ

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರ.ದ.ನ್ಯಾ.ದಂ. ಚಿಂಚೋಳಿ**